ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮುಖ್ಯ ಆದ್ದು. [ಸಂ 10.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 12, ಸನ 1903.

IIನೇ ಭಾಗ.

ಇಂಡ್ಯಗವರ್ನಮೆಂಟು, ರೆಸಿಡೆಂಟರು, ಜೀಲ್ಲಾ ಜಡ್ಜ್‌ರು ಮಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ನೋಟಿಫಿಕೇಷನ್, ತಾರೀಖು 1ನೇ ಮಾರ್ಚಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮಳವಳ್ಳಿ ತಾಲ್ಲೂಕು ಬಸವನಪಟ್ಟು ಸ್ಟೇಟ್ ಫಾರೆಸ್ಟಿನಲ್ಲಿ ಗುರ್ತುಮಾಡಿರುವ ಗಾಣಾಳುಗುಡ್ಡೆ ಕೂಪನಲ್ಲಿನ ಚೌಬೀನೆ ಮತ್ತು ಸೌದೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತುಗಳಿಗೆ ಬಳಪಟ್ಟು ಕಡದು ಸಾಗಿಸಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಮಾರ್ಚಿ 21ನೇ ತಾರೀಖು ದಿವಸ ಹಲಗೂರಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

2. ಈ ಹರಾಜು ಫಾರೆಸ್ಟ್ ಕನ್‌ಸರ್‌ವೇಟರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸುವ ಫಾರೆಸ್ಟ್ ಆಫಿಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೇಯೇ 15 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್‌ದಾರನು ಇಡಬೇಕಾದ 35 ಜುಮ್ಲಾ 50 ರೂಪಾಯಿಗಳನ್ನು ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

5. ಹರಾಜು ಮಂಜೂರಾತಿ ತಿಳಿಸಿದ ಒಂದು ವಾರದೊಳಗಾಗಿ ಮುಂಜೂರಾದ ಸವಾಲ್‌ದಾರನು ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪನ್ನು ಪುನಃ ಹರಾಜು ಮಾಡಿಸಲಾ ಬೀತು. ದುಸರೆ ಹರಾಜಿನಲ್ಲಿ ಏನಾದರೂ ಲುಕ್ಸಾನ್ ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿಕೊಡಬೇಕು. ಆದರೇ ಏನಾದರೂ ಜಾಸ್ತಿ ಬಂದರೆ ಹಿಸ್ಸೆ ದೊರಿಯಲಾರದು.

ಷರತ್ತುಗಳು.

1. ಸಂದಲ್ ಗಿಡಗಳು, ಗುರ್ತುಮಾಡಿಯಿರುವ ಮರಗಳು ಮತ್ತು ಸೊಸಿಗಳು ಅಂದರೆ ಸುತ್ತಳತೆ ಬಂದಡಿ ವಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಎಲ್ಲಾ ಗಿಡಗಳನ್ನು ಭೂಮಿಮಟ್ಟಕ್ಕೆ ಸರಿಯಾಗಿ ಕತರಾಯಿಸಿಕೊಳ್ಳತಕ್ಕದ್ದು.

2. ಸಾಂದೆ ಮತ್ತು ಚೌಬೀನೆ ಗಿಡಗಳು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ವುಂಟಾದರೆ ಕಂಟ್ರಾಕ್ಟುದಾರನು ಫಾರೆಸ್ಟು ಆಫಿಸರವರು ಗೊತ್ತು ಮಾಡುವ ಲುಕ್ಸಾನು ಪೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಮರಗಳು ಇತರ ಪಸಾಕೆ ಬಾಬುಗಳು ಮತ್ತು ಹುಲ್ಲು ಇದು ಯಾವದೂ ಹರಾಜಿಗೆ ಶೇರಿಯಿಲ್ಲಾ. ಯಾವದಾದರೂ ಮರಗಳನ್ನು ಮನ್ನಾನೆಯಾಗಿ ಕಡದರೆ ಒಂಥಾದ್ದೆಲ್ಲಾ ಇಲಾಖಾ ಮೂರೀಪತ್ತು ಕಾಲ್ಸು ಮಾಡಿಸಿ ತಗಲುವ ಲಾಗೋಡನ್ನು 100 ಬಂದನೂರು ರೂಪಾಯಿನ ಸಕ್ಯೂರಿಟಿ ಹಣ ಇಂದ ವಸೂಲ್ಮಾಡುತ್ತೆ.

4. ಚೌಬೀನೆ ಮತ್ತು ಸಾಂದೆ ಕತ್ತಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಜುಲೈ 31 ರೊಳಗೆ ಪೂರೈಸಿಕೊಳ್ಳತಕ್ಕದ್ದು. ಹಾಗೆಮಾಡದೇ ಇದ್ದರೆ ಕಂಟ್ರಾಕ್ಟುದಾರನು ಖಾತರಿಗಾಗಿ ಕೊಟ್ಟುಯಿರುವ ಪೊಬಲಗನ್ನು ಸರ್ಕಾರಕ್ಕೆ ಶೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಚೌಬೀನೆ ಸಾಂದೆ ಕತ್ತಾವಣಿ ಮಾಡಿಕೊಳ್ಳುವ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದಾಗಿ ಇರುತ್ತೆ.

5. ಕಂಟ್ರಾಕ್ಟುದಾರನು ಚೌಬೀನೆ ಮತ್ತು ಸಾಂದೆ ಖಾಯಿಷ್ ಮಾಡುವ ವೊತ್ತಕ್ಕೆ ಹಾಸಲ್ ಪಾವತಿ ಮಾಡಿದನಂತರ ರೇಂಜ್ ಫಾರೆಸ್ಟು ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸು ಕೊಡುತ್ತಾರೆ ಸದರಿ ಕೂಪಿನಿಂದ ರೂಢಿಸಿದ ಬಾಬು ಕೂಪಿನಿಂದ ಸಾಗಿಸುವದಕ್ಕೆ ಫಾರೆಸ್ಟರು ರಹದಾರಿ ಕೊಡುತ್ತಾರೆ.

6. ಕೂಪಿನಿಂದ ಸಾಂದೆ ಮತ್ತು ಚೌಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತವಾದ ಮೇಲೆ ಸಾಗಿಸಕೂಡದು. ಕತ್ತಾವಣಿ ಕೆಲಸಕ್ಕಾಗಿ ಕೊಟ್ಟುಯಿರುವ ಕೂಪಿನಲ್ಲಿ ಆಸಲ್ ಅಥವಾ ಸಾಂದೆಗಾಡಿ ಮಾರ್ಗವಲ್ಲಿ ಆಗಲಿ ಪೀಸಿಗೆಕಾಲದಲ್ಲಿ ಅಂದರೆ 1903ನೇ ಫೆಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಿವಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ವುಂಟಾದ್ದೆಂದು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಗಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

ನೋಟಿಫಿಕೇಷನ್, ತಾರೀಖು 6ನೇ ಮಾರ್ಚಿ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೆ ತಿಳಿಯುಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸುಪೇಟೆ ರೇಂಜಿಗೆ ಸೇರಿದ ಮಾಳಿ ಮತ್ತು ತೆಂಗಿನಕಲ್ಲು ಸ್ಟೇಟ್ ಫಾರೆಸ್ಟುಗಳಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದು ಆಗುವ ಕೂಪುಗಳಲ್ಲಿ ಸಾಂದೆ ಮತ್ತು ಚೌಬೀನೆ ಮರಗಳನ್ನು ಈ ಕೆಳಗಣ ಷರತ್ತುಗಳಿಗೆ ವಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟು ಆಫಿಸರವರಿಂದ 1903ನೇ ಇಸವಿ ಮಾರ್ಚಿ 24ನೇ ತಾರೀಖು ದಿವಸ ಬಿಡದಿ ವೊಕ್ಕಾಂವಲ್ಲಿ ಹಿರಂಗವಾಗಿ ಹರಾಜು ಹಾಕಲ್ಪಡುವದು :—

ಫಾರೆಸ್ಟ್ ಹೆಸರು.	ಕೂಪಿನ ನಂಬರು.	ಕೂಪಿನ ನಂಬರು.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಬಂದು ಎಕರೆಗೆ ಸಿಕ್ಕಬಹುದಾದ ಸುಮಾರು ವೊತ್ತ.	ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಷರಾ.
ಮಾಕಳಿ ಸ್ಟೇಟ್ ಫಾರೆಸ್ಟ್	I	I	130	ಚುಜ್ಜಲು, ಹುಲವೆ, ಪಚಾರಿ, ಈಜಿ, ಕಗ್ಗಲಿ, ದೇವದಾರಿ, ಹೆದ್ದಣಿ, ಚನ್ನಂಗಿ, ತೂಪರೆ, ನಾಲಾಡಿ, ದಿಂಡಿಗ, ಗೊರವಿ, ಅಲ, ಮೂಕರತಿ, ಬಿಡಕಲು, ಪಟ್ಟದಾವರ, ಹುರಗಲು ವಗೈರೆ	ಎಕರೆ ಬಂದಕ್ಕೆ ಸುಮಾರು $1\frac{1}{2}$ ಟನ್	ಚನ್ನಪಟ್ಟಣದ ರೈಲ್ವೆ ಸ್ಟೇಷನ್‌ಗೆ 6 ಮೈಲಿ	ಕೂಪಿನ ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಡಿವಾರ್ಕೇರ್ಷ್ ಲೈನು ಚಕ್ಕು ಬಂದಿ—ಉತ್ತರಕ್ಕೆ 10 ಅಡಿ ಅಗಲವುಳ್ಳ ಪಾಕಾದ ಲೈನು. ಪಶ್ಚಿಮಕ್ಕೆ ಜೋಳೆವೀನನಹಳ್ಳಿ. ಕೂಪು ಬಹಳ ಬೆಟ್ಟ ಕಾಡು.
ಡಿಟೋ ...	II	I	90	ಡಿಟೋ	ಎಕರೆ ಬಂದಕ್ಕೆ ಸುಮಾರು $2\frac{1}{2}$ ಟನ್‌ಗಳು	ಡಿಟೋ	ಉತ್ತರಕ್ಕೆ ಹೆಬ್ಬಳ್ಳ. ಪೂರ್ವಕ್ಕೆ ನಾಗವಾರ ಮಾಕಳಿ ಭಂಡಿಜಾಡು. ದಕ್ಷಿಣಕ್ಕೆ ಡಿವಾರ್ಕೇರ್ಷ್ ಲೈನ್. ಪಶ್ಚಿಮಕ್ಕೆ 10 ಅಡಿ ಅಗಲವುಳ್ಳ ಪಾಕಾದ ಕೂಪು ಲೈನ್. ಈಮೇರೆ ಚಕ್ಕು ಬಂದಿ ವುಂಟುದ್ದಾಗಿದೆ. ಕೂಪು ಅರ್ಧ ಬೆಟ್ಟಕಾಡು, ಗಾಡಿಗಳು ಸಾಮಾನ್ಯವಾಗಿ ಹೋಗಬಹುದು.

ಫಾರೆಸ್ಟ್ ಹೆಸರು.	ಕೊಲಸ ನಾಡುಗ ಸರಕಲೆ ನಂಬರು.	ಕೂಪು ನಂಬರು.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಬಂದು ಎಕರೆಗೆ ಸಿಕ್ಕಬಹುದಾದ ಸುಮಾರು ಮೊತ್ತ	ರೈಲ್ವೆ ಸ್ಟೇಷನ್‌ಗೆ ಫಾಸಲೆ.	ಪರಾ.
ಡಿಟೋ	III	I	120	ಚುಜ್ಜಲು, ಹುಲವೆ, ಪಚಾರಿ, ಈಜಿ, ಕಗ್ಗಲಿ, ದೇವದಾರಿ, ಹೆದ್ದರಣೆ, ಜನ್ನಂಗಿ, ತೂಪರೆ, ನಾಲಾಡಿ, ದಿಂಡಿಗ, ಗೊರವಿ, ಆಲ, ಮೂಕರತಿ, ಚಿಡಕಲು, ಬಿಟ್ಟದಾವರೆ, ಹುರಗಲು ವಗೈರೆ	ಎಕರೆ ಬಂದಕ್ಕೆ ಸುಮಾರು 3 ರ್ಟಗಳು	ಕುಲೀಸುಪ್ಯಾಟೆ ಸ್ಟೇಷನ್‌ಗೆ 8 ಮೈಲಿ	ಉತ್ತರಕ್ಕೆ ಕ್ಯಾಸಾಪುರದಿಂದ ಮಾಕಳ್ಳಿಗೆ ಹೋಗುವ ಪಾಕಾದ ಛಂಡಿಜಾಡು. ಪೂರ್ವಕ್ಕೆ ಡಿವಾರ್‌ಕೇರ್ಡ್ ಲೈನು. ದಕ್ಷಿಣಕ್ಕೆ ದೊಡ್ಡಹಳ್ಳ. ಪಶ್ಚಿಮಕ್ಕೆ ಪಾಕಾದ ಕೂಪು ಲೈನು. ಈ ಮೇರೆ ಚಕ್ಕು ಬಂದಿವುಳ್ಳದ್ದಾಗಿದೆ. ಕೂಪು ಅರ್ಧ ಬಟ್ಟ ಕಾಡು. ಗಾಡಿಗಳು ಹೋಗಲು ಸಾಧ್ಯವಿರುತ್ತೆ.
ಡಿಟೋ ...	IV	I	200	ಡಿಟೋ	ಎಕರೆ ಬಂದಕ್ಕೆ ಸುಮಾರು 2 ರ್ಟಗಳು	ಡಿಟೋ	ಕೂಪಿನ ಉತ್ತರ ಭಾಗಕ್ಕೆ ಕಣವಾನದಿ. ಪೂರ್ವಕ್ಕೆ ಡಿವಾರ್‌ಕೇರ್ಡ್‌ಲೈನು. ದಕ್ಷಿಣಕ್ಕೆ ಪಾಕಾದ ಕೂಪು ಲೈನು. ಪಶ್ಚಿಮದ ಅರ್ಧ ಭಾಗಕ್ಕೆ ಪಾಕಾದ ಕೂಪು ಲೈನು. ಬಾಕಿ ಅರ್ಧ ಭಾಗಕ್ಕೆ ನದೀಗೆ ಹೋಗುವ ನಾಲಾ. ಈ ಮೇರ ಚಕ್ಕು ಬಂದಿವುಳ್ಳದ್ದಾಗಿದೆ.
ತಂಗಿನಕಲ್ಲು ಸ್ಟೇಟ್ ಫಾರೆಸ್ಟ್	I	I	120	ನಾಯಿಬ್ಯಾಲ, ಚುಜ್ಜಲು, ಹುಲವೆ, ಪಚಾರಿ, ಈಜಿ, ಕಗ್ಗಲಿ, ದೇವದಾರು, ಹೆದ್ದರಣೆ, ಜೆನ್ನಂಗಿ ವಗೈರೆ	ಎಕರೆ ಬಂದಕ್ಕೆ ಸುಮಾರು 3 ರ್ಟಗಳು	ಕ್ಲೋಸ್‌ಪ್ಯಾಟೆ ರೈಲ್ವೆ ಸ್ಟೇಷನ್‌ಗೆ 7 ಮೈಲಿ	ಉತ್ತರಕ್ಕೆ ಡಿವಾರ್‌ಕೇರ್ಡ್ ಲೈನು. ಪೂರ್ವಕ್ಕೂ ಮತ್ತು ದಕ್ಷಿಣಕ್ಕೂ ಪಾಕಾದ ಕೂಪು ಲೈನುಗಳು. ಪಶ್ಚಿಮಕ್ಕೆ ತೆಂಗಿನಕಲ್ಲಿನಿಂದ ಕಡನಕುಪ್ಪೆಗೆ ಹೋಗುವ ಪಾಕಾದ ಕಾಲುದಾರಿ. ಈ ಮೇರೆ ಚಕ್ಕು ಬಂದಿ ವುಳ್ಳದ್ದಾಗಿದೆ. ಅರ್ಧ ಮೈದಾನ ಕಾಡು. ಸುಲಭವಾಗಿ ಗಾಡಿಗಳು ಹೋಗಬಹುದು.
ಡಿಟೋ ...	II	I	100	ಡಿಟೋ	ಎಕರೆ ಬಂದಕ್ಕೆ ಸುಮಾರು 2½ ರ್ಟಗಳು	ಚನ್ನಪಟ್ಟದ ರೈಲ್ವೆ ಸ್ಟೇಷನ್‌ಗೆ 9 ಮೈಲಿ	ಉತ್ತರಕ್ಕೆ ದೊಡ್ಡ ಹಳ್ಳ. ಪೂರ್ವದ ಅರ್ಧ ಭಾಗಕ್ಕೆ ಪಾಕಾದ ಕೂಪು ಲೈನು. ಬಾಕಿ ಅರ್ಧ ಭಾಗಕ್ಕೆ ಉತ್ತರ ದಿಕ್ಕಿನ ಚಕ್ಕು ಬಂದಿಗೆ ಹೋಗುವ ವುಪಹಳ್ಳ. ದಕ್ಷಿಣಕ್ಕೆ ಡಿವಾರ್‌ಕೇರ್ಡ್ ಲೈನು. ಪಶ್ಚಿಮಕ್ಕೆ ಪಾಕಾದ ಕೂಪು ಲೈನು. ಈ ಮೇರೆ ಚಕ್ಕು ಬಂದಿ ವುಳ್ಳದ್ದಾಗಿದೆ. ಸಾಧಾರಣವಾಗಿ ಮೈದಾನ ಕಾಡು. ಸುಲಭವಾಗಿ ಗಾಡಿಗಳು ಹೋಗಬಹುದು.
ಡಿಟೋ ...	III	I	200	ಡಿಟೋ	ಎಕರೆ ಬಂದಕ್ಕೆ 2½ ರ್ಟಗಳು	ಚನ್ನಪಟ್ಟದ ರೈಲ್ವೆ ಸ್ಟೇಷನ್‌ಗೆ 6 ಮೈಲಿ	ಉತ್ತರದಿಕ್ಕಿನ ಅರ್ಧ ಭಾಗಕ್ಕೆ ಪಾಕಾದ ಕೂಪು ಲೈನು. ಬಾಕಿ ಅರ್ಧಕ್ಕೆ ನಾಲಾ. ಪೂರ್ವಕ್ಕೆ ವಾಲಂಗೆರೆಯಿಂದ ವರಗಾರಹಳ್ಳಿಗೆ ಹೋಗುವ ಪಾಕಾದಕಾಲುದಾರಿ. ದಕ್ಷಿಣಕ್ಕೂ ಮತ್ತು ಪಶ್ಚಿಮಕ್ಕೂ ಪಾಕಾದ ಕೂಪು ಲೈನುಗಳು. ಈ ಮೇರೆ ಚಕ್ಕು ಬಂದಿವುಳ್ಳದ್ದಾಗಿದೆ. ಕೂಪು ಬಟ್ಟ ಕಾಡು. ಗಾಡಿಗಳು ಹೋಗಲು ಸಾಧ್ಯವಿರುತ್ತೆ.

II. ಈ ಹರಾಜು ಫಾರೆಸ್ಟ್ ಕ್ಷೇತ್ರವೇಟರ್ ಸಾಹೇಬರವರ ಮಂಜೂರಾತೀಗೆ ವಳಪಟ್ಟು ಇರುತ್ತೆ.

III. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸುವ ಆಫಿಸರವರಿಗೆ ಅಧಿಕಾರವಿರುತ್ತೆ.

IV. ಸವಾಲ್ದಾರನು ಸವಾಲ್ ಮಾಡುವದಕ್ಕೆ ಮುಂಚೆಯೆ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್ದಾರನ ಹೊರ್ತು ಹರಾಜು ಕೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್ದಾರನು ಇಡಬೇಕಾದ 25 ರೂಪಾಯಿ ಜುಮ್ಲಾ 50 ರೂಪಾಯಿಗಳನ್ನು ಗವರ್ನ್ಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

V. ಮಂಜೂರಾದ ಸವಾಲುದಾರನು ಪ್ರತಿ ಸಾವಿರ ಮೊತ್ತ ಅಳತೆಯಾದಹಾಗೆಲ್ಲಾ ಅಂಥಾ ಸಾವಿರ ಮೊತ್ತದ ಕಿಮ್ಮತ್ತನ್ನು ಪಾವತಿ ಮಾಡಬೇಕು. ನುತ್ತು ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪು ಯಾ ಕಂಪಾರ್ಟ್‌ಮೆಂಟನ್ನು ಪುನಹಾ ಹರಾಜು ಮಾಡಿಸಲಾದೀತು. ದುಸರಾ ಹರಾಜಿನಲ್ಲಿ ಏನಾದರೂ ಲುಕ್ಸಾನು ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿ ಕೊಡಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೇಗೆ ಈತನು ಭಾಗಿಯಾಗುವದಿಲ್ಲ.

ಷ ರ ತ್ತು ಗ ಳು.

1. ಸಂದಲ್, ಅಳಲೆ, ಹುಣಸೆ, ಜಾಲಾರಿ ಗಿಡಗಳು, ಎಕರೆ ಬಂದಕ್ಕೆ ಸರಾಸರಿ 40ರ ಕಿಂತ ಜಾಸ್ತಿ ಇಲ್ಲದೆ ಗುರ್ತುಮಾಡಿರುವ ಮತ್ತು ಸೊಪ್ಪಿಗೆಳು ಅಂದರೆ ಸುತ್ತು ಅಳತೆ ಬಂದು ಅಡಿ ಬಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಎಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸಾವಿಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟು ದರೆ, ಕಂಟ್ರಾಕ್ಟ್‌ದಾರನು ಡಿ|| ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ಮೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಕೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಿಸೆ, ಅಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಕೇರಿ ಇಲ್ಲ. ಉಳಕಿಕೊಂಡಿರುವ ಸಂದಲ್, ಅಳಲೆ, ಹುಣಸೆ, ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮುನ್ಸಾನೆಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮೂರಿಫತ್ತು ಕಾಪಿಸ್ಸು ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಸೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸಾವಿ ಮತ್ತು ಚಾಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಇಸವಿ ಜುಲೈ ಆಖೈರುವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟ್‌ದಾರನು ಪಾವತಿ ಮಾಡಿರುವ ಮೊಬಲಗನ್ನು ಸರಕಾರಕ್ಕೆ ಸೇರಿಸಕೊಟ್ಟುವದಲ್ಲದೆ ಮೇಲ್ಕಂಡ ಸಾವಿ ಮತ್ತು ಚಾಬೀನೆ ಕತರಾವಣಿ ವ ಸಾಗಿಸತಕ್ಕ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ.

5. ಕಂಟ್ರಾಕ್ಟ್‌ದಾರ ಖಾಯಿಪ್ಮಾಡುವ ಸಾವಿ ಮೊತ್ತಕ್ಕೆ ತೇದಾದು ಆದ ದರ ಗಾಡಿ ಜೋಜಾ ಬಂದಕ್ಕೆ 34 ಸಲೆ ಅಡಿ ಅಥವಾ ಟರ್ ಬಂದಕ್ಕೆ 68 ಸಲೆ ಅಡಿ ಈ ಮೇರೆ ಹಾಸಲ್ ಯಾ ತೀರ್ವೆ ಮೊಬಲಗು ಪಾವತಿ ಮಾಡಿದ ನಂತರ ರೇಂಜ್ ಫಾರೆಸ್ಟ್ ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸ್ ಕೊಡುತ್ತಾರೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನೌಕರರು ರಹದಾರಿ ಕೊಡುತ್ತಾರೆ.

6. ಕೂಪು ಯಾ ಕಂಪಾರ್ಟುಮೆಂಟಿನಿಂದ ಚಾಬೀನೆ ಮತ್ತು ಸಾವಿಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟು ಇರುವ ಕೂಪಿನಲ್ಲಿ ಆಗಲಿ ಅಥವಾ ಸಾವಿ ಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1903ನೇ ಫೆಬ್ರವರಿ 1ರ ಲಾಗಾಯಿತು 1903ನೇ ಮೇ 31ರ ವರಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟ್‌ದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ವುಂಟಾದ್ದೆಂದು ಡಿ|| ಫಾರೆಸ್ಟ್ ಆಫಿಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟ್‌ದಾರನೇ ಜವಾಬ್ ಮಾಡಬೇಕು.

7. ಕಂಟ್ರಾಕ್ಟ್‌ದಾರನ ಕಡೆ ಗಾಡಿಯವರು ರೈಲ್ವೆ ಸ್ಟೇಷನ್‌ಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಣಿ ಸಾವಿಯನ್ನು ಕಡದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇಷನ್ ಪ್ರಕಾರ ಪ್ರಾಸಿಕ್ಯೂಷನ್‌ಗೆ ಗುರಿಮಾಡಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಅಜ್ಜಪಲ್ಲಿ ಗ್ರಾಮದ ಕೃಷ್ಣಪ್ಪ, ಗಂಗಾಧರಪ್ಪ ವಗೈರೆ 4 ಜನರಿಂದ ಬರಬೇಕಾದ ಜಮೀರ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಜೇರಿಯಲ್ಲಿ ಅಮಲ್ದಾರ್ ಅಥವಾ ಅ|| ಕ|| ಸಾ|| ರುಬರೂಬು 28—4—1903ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.